## ಇಲ್ಲಿಯವರೆಗೆ



ಆದರ್ಶನಿಗೆ ಅಪೂರ್ವಳನ್ನು ಮದುವೆಯಾಗಬೇಕು ಎಂಬ ಬಯಕೆಯ ಬೆನ್ನಲ್ಲೇ ಸೂರ್ಯನಿಗೂ ಅಪೂರ್ವಳನ್ನೇ ಮದುವೆಯಾಗುವ ಮನಸ್ಸಾಗುತ್ತದೆ. ವಸುಮತಿಗೆ ಈ ವಿಷಯ ಗೊತ್ತಾದ ಕೂಡಲೇ 'ಈ ಮದುವೆ ಬೇಡ ಅಪೂರ್ವ' ಎನ್ನುತ್ತಾಳೆ. ಇದರಿಂದ ಅಪೂರ್ವಳಿಗೆ ಬೇಜಾರಾಗುತ್ತದೆ. ತನ್ನ ಮನಸ್ಸನ್ನು ಈಗಾಗಲೇ ಸೂರ್ಯ ಆವರಿಸಿಕೊಂಡು ಬಿಟ್ಟದ್ದಾನೆ. ಮದುವೆಯಾದರೆ ಸೂರ್ಯನನ್ನೇ ಎಂದು ದೃಢನಿರ್ಧಾರ ಮಾಡುತ್ತಾಳೆ ಅಪೂರ್ವ. 'ನಿನ್ನ ಬದುಕು, ನಿನ್ನ ನಿರ್ಧಾರ. ನಾವು ಹಿರಿಯರಾಗಿ ಏನೇ ಹೇಳಿದರೂ ಅದರ ಹಿಂದೆ ಒಂದು ಅರ್ಥ ಇರುತ್ತದೆ ಎಂದು ವಸುಮತಿ ಸೂಕ್ಷ್ಮವಾಗಿ ಹೇಳುತ್ತಾಳೆ. ಆದರೆ ಸೂರ್ಯನನ್ನು ಮದುವೆಯಾಗುವ ಅಪೂರ್ವಳ ನಿರ್ಧಾರ ಅಚಲವಾಗುತ್ತದೆ.

'ಏನಾಯ್ತು..ಸೂರ್ಯ..?'

ಅಪೂರ್ವ ಅಮಾಯಕಳಂತೆ ಕೇಳಿದಾಗ, ಸೂರ್ಯ ಏನನ್ನೂ ಹೇಳುವುದಿರಲಿ, ಮಾತನಾಡುವ ಸ್ಥಿತಿಯಲ್ಲೂ ಇರಲಿಲ್ಲ. ಅಲ್ಲಿ ಒಂದು ಕ್ಷಣವೂ ನಿಲ್ಲದೆ, ಸೂರ್ಯ ತನ್ನ ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡ. ಇದನ್ನು ಕಂಡು ವಿಜಯಮ್ಮನಿಗೆ ತಡೆಯಲಾಗಲಿಲ್ಲ. ಶಂಕರನ ಮುಂದೆ ಬಂದು ತಮ್ಮ ಆಕ್ರೋಶವನ್ನು ಹೊರ ಕಕ್ಕಿದರು.

'ಆಯ್ತಾ.. ಬಂದ ಕೆಲಸ? ಇನ್ನು ಹೊರಡಿ ನೀವು.. ಹೊಲಸು ಜನ.. ನೀವೂ ಖುಷಿಯಾಗಿರಲ್ಲ.. ಇನ್ನೊಬ್ಬರನ್ನು ಖುಷಿಯಾಗಿರಲು ಬಿಡುವುದಿಲ್ಲ..'

'ಸಾಕಮ್ಮ.. ಬಾಯಿ ಇದೆ ಅಂತ ನಮ್ಗೆ ಅನ್ನಲು ಬಿಡಬೇಡಿ.. ಕೊಲೆಗಾರ ಮಗನಿಗೆ ಯಾರೂ ಹೆಣ್ಣು ಕೊಡಲ್ಲ ಅಂತ ನಮ್ಮ ಹುಡ್ಗೀನ ಬುಟ್ಟೀಗೆ ಹಾಕಿಕೊಳ್ತಿದ್ದೀರ..? ಅವ್ಳಿಗ್ಯಾವ ಹಣೆಬರಹ ನಿಮ್ಮ ಮಗನ ಕೈ ಹಿಡಿಯಲು.. ಅವ್ಳು ಇಂಜಿನಿಯರಿಂಗ್ ಕಲ್ತಿದ್ದಾಳೆ..' ಶಂಕರ ರೇಗಿದ.

'ಸಾಕಯ್ಯ.. ಇಂಜಿನಿಯರಿಂಗ್ ಓದಿಸಿದ್ದು ಯಾರು? ಇಂಜಿನಿಯರಿಂಗ್ ಯಾಕೆ..? ಅವ್ಳಿಗೆ ಚಿಕ್ಕಂದಿನಿಂದಲೂ ಓದಕ್ಕೆ ಧನ ಸಹಾಯ ಮಾಡಿದ್ದು ನಾವೇ ಅನ್ನೋದು ಮರೆತು ಹೋಯ್ತಾ..? ನಮ್ಮ ಹಣದಲ್ಲಿ ಅವ್ಳಿಗೆ ನೀವು ಅನ್ನ ಹಾಕಿ ಬೆಳೆಸಿದ್ರೇ ಹೊರತು.. ನೀವೇನು ದುಡಿದು ಸಂಪಾದಿಸಿದ್ದರಲ್ಲಿ ಅವ್ಳಿಗೇನೂ ತಂದು ಕೊಟ್ಟಿಲ್ಲ.. ಈಗ ದೊಡ್ಡದಾಗಿ ಹಕ್ಕು ತೋರಿಸ್ತೀರಾ ನೀವು..?'

ಶಂಕರನೂ ಸೋಲದೆ, 'ನೀವೇನೂ ಹೀಗೇ ಧನ ಸಹಾಯ ಮಾಡಿದ್ರಾ..? ನಿಮ್ಮ ಪಾಪ ತೊಳೆಯಲು ತಾನೇ ನೀವು ಈ ಕೆಲಸ ಮಾಡಿದ್ದೀರಾ.. ನಿಮ್ಮ ಮಗನಿಂದ ಅವ್ಳ ತಂದೆ ಕೊಲೆ ಆಗಿದೆ.. ಅವ್ಳಿಗೆ ದಿಕ್ಕು ದಿಸೆ ಇರಲಿಲ್ಲ.. ನಮ್ಮ ಮಡಿಲಲ್ಲಿ ಈ ಮಗೂನ್ನ ಹಾಕಿ ಪ್ರತಿ ತಿಂಗ್ಳು ದುಡ್ಡು ಕಳಿಸ್ತೀನಿ.. ನೀವೇ ಸಾಕಿಕೊಳ್ಳಿ ಅಂದವ್ರು ನೀವು ತಾನೇ..?' ಶಂಕರ, ಮುಂದೆ ಮಾತನಾಡಿದ್ದೊಂದೂ ಅಪೂರ್ವಳಿಗೆ ಆಲಿಸಲೇ ಇಲ್ಲ. ಎಷ್ಟೋ ವರ್ಷಗಳಿಂದ ಕತ್ತಲ ಗರ್ಭದಲ್ಲಿ ಅಡಗಿದ್ದ ಕಟುಸತ್ಯವು ಹೊರ ಬಂದಿತ್ತು.

'ಸೂರ್ಯ ಕೊಂದದ್ದು ಬೇರೆ ಯಾರನ್ನೋ ಅಲ್ಲ...! ತನ್ನ ತಂದೆಯನ್ನು..!' ನೂರಾರು ಭರ್ಜಿಗಳು ಒಮ್ಮೆಗೇ ಬಂದು ಎದೆಗೆ ಇರಿದಂತಾಯಿತು. ಆ ಕಹಿ ಸತ್ಯ ಅರಗಿಸಿಕೊಳ್ಳಲಾಗದೇ ಅಪೂರ್ವ ಅಲ್ಲೇ ಕುಸಿದು ಬಿದ್ದಳು.

### ಅಧ್ಯಾಯ 24

'ಅಪೂರ್ವ.. ಕಣ್ಣು ಬಿಡು..! ಇಲ್ನೋಡು.. ಅಪೂರ್ವ..' ವಸುಮತಿಯ ದನಿಗೆ, ಮುಖದ ಮೇಲೆ ಬಿದ್ದ ತಣ್ಣೀರಿನ ಸ್ಪರ್ಶಕ್ಕೆ ನಿಧಾನವಾಗಿ ಅಪೂರ್ವ ಕಣ್ತೆರೆದಳು. ಎಲ್ಲರೂ ಆತಂಕಿತರಾಗಿ ಅವಳನ್ನು ಸುತ್ತುವರೆದು ನಿಂತಿದ್ದರು. ಅವಳ ಕಣ್ಮುಂದೆ ಅಪರಾಧಿ ಮನೋಭಾವ ಹೊತ್ತ ಸೂರ್ಯ ತಲೆತಗ್ಗಿಸಿ ನಿಂತಿದ್ದ.

'ಸೂರ್ಯ.. ಯಾಕೆ? ಹೀಗೆ ಮಾಡಿದ್ರಿ..?' ಅವಳ ನೋವಿನ ದನಿ, ಅದರಲ್ಲಿದ್ದ ಆಕ್ಷೇಪ, ಸಿಟ್ಟು, ನೋವು, ಹತಾಶೆಗಳ ಮಿಶ್ರಿತ ಭಾವ ಅವನನ್ನು ಒಳಗಿನಿಂದ ಇನ್ನಷ್ಟು ಅಲುಗಾಡಿಸಿಬಿಟ್ಟಿತು. ಭೂಮಿ ಬಾಯ್ತೆರೆದು ತನ್ನನ್ನು ನುಂಗಬಾರದೇ ಎನಿಸಿತ್ತು ಸೂರ್ಯನಿಗೆ. ಇದೆಂಥ ಸಂದಿಗ್ಧ ಪರಿಸ್ಥಿತಿ..! ಪ್ರೀತಿಸಿದ ಹೆಣ್ಣಿನ ತಂದೆಯ ಕೊಲೆಗಾರ ನಾನೇನಾ? ನನ್ನಿಂದ ಹತ್ಯೆಯಾಗಿದ್ದು ಅಪೂರ್ವಳ ತಂದೆ...! ಆ ಕಹಿಸತ್ಯ ಅನಾವರಣಗೊಂಡಿದ್ದು ಅವನ ಮುಂದೆ ಇಂದೇ.. ಅದೂ ಇಬ್ಬರು ಜೊತೆಗೂಡಿ ಹೊಸ ಬದುಕನ್ನು ಸ್ವೀಕರಿಸುವ ಹೊಸ್ತಿಲಲ್ಲಿ ನಿಂತಿರುವಾಗ..!

ಅಪೂರ್ವ ಎದ್ದು ಕುಳಿತು ಒಂದೇ ಸಮನೆ ರೋದಿಸತೊಡಗಿದಾಗ, ಸೂರ್ಯನಿಗೆ ಅವಳನ್ನು ಎದೆಗಾನಿಸಿಕೊಂಡು ತನ್ನ ತುಟಿಗಳಿಂದ ಅವಳ ಕಂಬನಿ ತೊಳೆಯಬೇಕೆಂದೆನ್ನಿಸಿತು. ಅವಳನ್ನು ಸಂತೈಸಬೇಕೆನಿಸಿತು. ಆದರೂ ನಿಂತಲ್ಲಿಂದ ಒಂದು ಹೆಜ್ಜೆ ಅವನಿಗೆ ಮುಂದಿಡಲು ಸಾಧ್ಯವಾಗಲಿಲ್ಲ. ಅವನನ್ನು ಬಂಧಿಸಿದ್ದು ಯಾವುದೋ ಅವ್ಯಕ್ತ ಸಂಕೋಲೆ. ಅಪರಾಧಿ ಪ್ರಜ್ಞೆಯ ಬೇಡಿ.

'ಯಾವ ಮುಖವಿಟ್ಟು ನಿನ್ನೆದುರು ನಿಲ್ಲಲಿ..?'

ಅಪೂರ್ವ ಪ್ರಜ್ಞೆ ತಪ್ಪಿ ಬಿದ್ದಿರುವ ಸಂಗತಿ ತಿಳಿದು ಅವನು ಕೋಣೆಯಿಂದ ಧಾವಿಸಿ ಬಂದಿದ್ದ. ಅವಳು ಚೇತರಿಸಿಕೊಂಡದ್ದನ್ನು ಕಂಡ ಬಳಿಕ ಅವಳಿಗೆ ಮುಖ ತೋರಿಸುವ ನೈತಿಕತೆ ಆತನಲ್ಲಿ ಉಳಿದಿರಲಿಲ್ಲ. ಅಲ್ಲಿಂದ ಮತ್ತೆ ಅವನು ಸರಿದು ಹೋಗಿದ್ದ.

ಇಷ್ಟು ಹೊತ್ತು ಮೌನ ಧರಿಸಿದ್ದ ರಾಯರು ಈಗ ಬಾಯ್ಬಿಟ್ಟರು, 'ಇದೇ ಕಾರಣದಿಂದ ನಾನು ಈ ಸಂಬಂಧಕ್ಕೆ ಹಿಂದೇಟು ಹಾಕಿದ್ದು ಅಪೂರ್ವ.. ಸೂರ್ಯನಿಗೂ ಈ ಸಂಗತಿ ತಿಳಿದದ್ದು ಈಗಲೇ.. ಅವನಿಗೂ ಈ ಸತ್ಯ ತಿಳಿದಿರಲಿಲ್ಲ...' ಸಮರ್ಥಿಸಿಕೊಳ್ಳುವಂತೆ ನುಡಿದರು.

'ನಿಮಗೆ ತಿಳಿದಿತ್ತಲ್ಲ ಅಂಕಲ್.. ಮತ್ತೆ ನನಗ್ಯಾಕೆ ತಿಳಿಸಲಿಲ್ಲ..? ನಿಮ್ಮಿಂದ ಇದನ್ನು ನಿರೀಕ್ಷಿಸಿರಲಿಲ್ಲ ನಾನು..' ಆಕ್ಷೇಪ, ನೋವು ತುಂಬಿದ ದನಿಯಲ್ಲಿ ನುಡಿದಳು. ರಾಯರು ತೀರಾ ಹಿಡಿಯಷ್ಟಾದರು.

'ಹಾಗಲ್ಲಮ್ಮಾ ನೀವಿಬ್ರೂ ಪರಸ್ಪರ ಮೆಚ್ಚಿಕೊಂಡಿದ್ದೀರಿ.. ನಾನು ಪ್ರತ್ಯೇಕ ಕರೆದು, ನಿನಗೆ ಪರೋಕ್ಷವಾಗಿ ಈ ಸಂಗತಿ ತಿಳಿಸಲು ಯತ್ನಿಸಿದೆ... ನೀನೇ ಏನೇನೋ ಅಂದು, ಮಾತಿನಿಂದ ಕಟ್ಟಿ ಹಾಕಿದೆ...'

'ನೀನು ನಿಜವಾಗಲೂ ನನ್ಮಗನ್ನ ಪ್ರೀತಿಸುತ್ತೀಯಾದರೆ ಈ ಸಂಗತಿ ನೀನು ದೊಡ್ಡ ಮನಸ್ಸಿನಿಂದ ಕ್ಷಮಿಸ್ತೀಯ ಅಂತ ನಾವು ಭಾವಿಸಿದೆವು ಕಣಮ್ಮಾ..' ಎಂದರು ವಿಜಯಮ್ಮ.

ಅಪೂರ್ವ ಆಕೆಯ ಕಡೆಗೆ ತಿರುಗಿ, 'ಕ್ಷಮಿಸಿ ಬಿಡುವಷ್ಟು ದೊಡ್ಡ ಮನಸ್ಸು ನನಗಿದೆಯೋ, ಇಲ್ಲವೋ ನನಗೆ ತಿಳಿಯದು.. ಮರೆತು ಬಿಡುವ ಸಣ್ಣ ನೋವೇನೂ ಅಲ್ಲ ಇದು.. ನಾನು ಶಾಲೆಯಿಂದ ಬೇರೆ ಮಕ್ಕಳೊಡನೆ ಮನೆಗೆ ಬಂದು ಅಂಗಳದಲ್ಲಿ ಕಾಯ್ತಾ ಕೂತಿದ್ದೆ.. ಅಪ್ಪ ಕತ್ತಲಾದಾಗ ಬರ್ತಿದ್ರು.. ನನಗೆ ಬಿಸ್ಕತ್ತೊ, ಚಾಕಲೇಟು ಹಿಡಿದು ತರ್ತಿದ್ರು.. ಆಮೇಲೆ ಅವ್ರು ನನ್ಗೆ ಅಡುಗೆ ಮಾಡಿ ಬಡಿಸ್ತಿದ್ರು.. ಹಾಡು ಹಾಡಿ ಮಲಗಿಸ್ತಿದ್ರು.. ಅಪ್ಪ ಅನ್ನುವ ವ್ಯಕ್ತಿಯೊಂದೊಡನೆ, ನನಗೆ ನೆನಪಿಗೆ ಬರೋದು ಇಷ್ಟೇನೆ... ಆದ್ರೆ ನಿಮ್ಗೆಲ್ಲಾ ಅಪ್ಪ ಅಂದ್ರೆ ಎಷ್ಟೊಂದು ನೆನಪುಗಳಿರಬೇಕಲ್ವಾ.. ನನ್ನನ್ನು ಆ ನೆನಪುಗಳಿಂದ ವಂಚಿತರನ್ನಾಗಿ ಮಾಡಿದ್ದು ನಿಮ್ಮ ಮಗ.. ಇನ್ನೊಬ್ಬರ ಮನೇಲಿ ಅನಾಥ ಪ್ರಜ್ಞೆಯಿಂದ ಬಾಳಲು ಬಿಟ್ಟದ್ದಕ್ಕೆ ಕಾರಣ ನಿಮ್ಮ ಮಗ.. ನನ್ನ ನಗು,